| ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಚಿಂತಾಮಣಿ | | | |
|---|---|---|---|
| ಸಿಸಿ ನಂ. 116/2019 | | | |
| ಸಾಕ್ಷಿದಾರರ ಹೆಸರು | ಶಿವಶಂಕರ್ ಮೂರ್ತಿ | | |
| ತಂದೆ ಹೆಸರು | ಲೇಟ್ ಎಂ. ಮೈಲಾರಿ | ಪಿಡಬ್ಲ್ಯೂ | 8 |
| ವಯಸ್ಸು | 45 ವರ್ಷ | ಸಿಡಬ್ಲ್ಯೂ | 7 |
| ಉದ್ಯೋಗ | ಸೀನಿಯರ್ ಸಬ್ ರಿಜಿಸ್ಟ್ರಾರ್ | ಪ್ರಮಾಣ ವಚನ | |
| ವಾಸ ಸ್ಥಳ | ಚಿಂತಾಮಣಿ | ಭೋದಿಸಿದ ದಿನಾಂಕ | 16-11-2023 |

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

2016 ರಿಂದ 2019 ರವರೆಗೆ ನಾನು ಚಿಂತಾಮಣಿಯ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಸಬ್ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ನಿಪಿ-2 ದಾಖಲೆಯಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ. ದಸ್ತಾವೇಜು ಸಂಖ್ಯೆ 204/1989-90 ರ ಶುದ್ಧ ಕ್ರಯ ಪತ್ರದ ದೃಢೀಕರಣ ನಕಲನ್ನು ಕೇಳಿದ್ದು ನಮ್ಮ ಕಛೇರಿಯಲ್ಲಿ ಲಭ್ಯವಿರುವ ದಾಖಲೆಗಳನ್ನು ದೃಢೀಕರಿಸಿ ಹಾಜರುಪಸಿದ್ದು ಆ ವಿಚಾರಕ್ಕೆ ಸಂಬಂದಿಸಿದಂತೆ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ನಿಪಿ-2 ರ ದಾಖಲೆಯಲ್ಲಿ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 2 ( ಸಿ) ಎಂದು ಗುರುತಿಸಲಾಯಿತು. ನಿಪಿ-4 ರಿಂದ 6 ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಸ್ ಆರ್ ಬಿ ವಕೀಲರಿಂದಃ

ಆ ಪತ್ರಗಳು ಯಾರಿಗೆ ಸೇರಿದೆ ಎನ್ನುವುದರ ಬಗ್ಗೆ ನಿಮಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಸರಿ. ಆ ಪತ್ರಗಳಲ್ಲಿ ಯಾವ ಯಾವ ವ್ಯಕ್ತಿಗಳ ಸಹಿಗಳು ಇದೆ ಎನ್ನುವುದರ ಬಗ್ಗೆ ನಿಮಗೆ ಖುದ್ದು ಮಾಹಿತಿ ಇರುವುದಿಲ್ಲ ಎಂದರೆ ಮಾಹಿತಿ

ಇರುವುದಿಲ್ಲ. ಆ ಪತ್ರಗಳನ್ನು ಬರೆದುಕೊಟ್ಟವರಾರು ಬರೆಸಿಕೊಂಡವರು ಯಾರು ಎನ್ನುವುದರ ಬಗ್ಗೆ ನಿಮಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಅದನ್ನು ನೋಡಿದರೆ ಓದಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2 ದಾಖಲೆಗೆ ಸಹಿಯನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಮಾಡಿರುತ್ತೇನೆ. ನಿಪಿ-2 ರಲ್ಲಿ ಇರುವ ವಿವರಣೆ ಬಗ್ಗೆ ನಿಮಗೆ ಗೊತ್ತಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ. ಇಂತಹ ದಾಖಲೆಗಳು ಬೇಕು ಅಂತ ಪೋಲಿಸರು ಕೇಳಿದ ಮೇರೆಗೆ ಅವುಗಳನ್ನು ದೃಢೀಕರಣ ಮಾಡಿ ಕೊಟ್ಟಿರುತ್ತೀರಾ ಎಂದರೆ ಸರಿ. ನಿಪಿ-2 ದಾಖಲೆಗೆ ಸಹಿ ಮಾಡುವಾಗ ನಿಮ್ಮ ಜೊತೆ ಬೇರೆ ಯಾರು ಸಹಿ ಮಾಡಿದರು ಎಂದು ಹೇಳಲಾಗುತ್ತದಾ ಎಂದರೆ ನಾನು ಒಬ್ಬನೇ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಘಟನೆಗೆ ಸಂಬಂಧಪಟ್ಟಂತೆ ದಾಖಲೆಗಳ ದೃಢೀಕರಣಕ್ಕೆ ಸಂಬಂಧಪಟ್ಟಂತೆ ಸಹಿ ಮಾಡಿದ್ದು ಬೇರೆ ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ದಾಖಲೆ ಕೇಳಿದ್ದು ಅದಕ್ಕೆ ಸಹಿ ಮಾಡಿರುತ್ತೇನೆ. ಪೋಲಿಸ್ ಸಬ್ ಇನ್ಸ ಪೆಕಟರ್ ರವರು ನನ್ನ ಮುಂದೆ ಯಾವುದೇ ಸಹಿ ಮಾಡಿರುವುದಿಲ್ಲ. ನೊಂದಣಿ ಮಾಡುವಾಗ ಆದಾರ್ ಕಾರ್ಡ್ ತೆಗೆದುಕೊಳ್ಳುತ್ತೀರಿ ಎಂದರೆ ಮೊದಲು ತೆಗೆದುಕೊಳ್ಳುತ್ತಿರಲಿಲ್ಲ ಅದನ್ನು ಕಡ್ಡಾಯ ಮಾಡಿದ ನಂತರ ತೆಗೆದುಕೊಳ್ಳುತ್ತಿದ್ದೇವೆ. ಯಾವ ವರ್ಷದಲ್ಲಿ ಅದನ್ನು ಕಡ್ಡಾಯ ಮಾಡಲಾಗಿದೆ ಎಂದರೆ ಸುಮಾರು 7 ವರ್ಷ ನಿಖರವಾಗಿ ಗೊತ್ತಿರುವುದಿಲ್ಲ. ನಾನು ಸಬ್ ರಿಜಿಸ್ಟ್ರಾರ್ ಆಗಿ 2009 ರಿಂದ ಕೆಲಸ ಮಾಡುತ್ತಿದ್ದೇನೆ. 2012-13 ರಲ್ಲಿ ಆದಾರ್ ಕಾರ್ಡ್ ಇತ್ತು ಎಂದರೆ ನಿಖರವಾಗಿ ಗೊತ್ತಿಲ್ಲ.

ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ ಮೇರೆಗೆ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.